(ಇಂದು ದಿನಾಂಕ: 22-07-2026 ರಂದು ಸಾಕ್ಷಿದಾರರನ್ನು ಕರೆಯಿಸಲಾಯಿತು, ಪ್ರಮಾಣ ವಚನ ಬೋಧಿಸಲಾಯಿತು)

**<u>ಪಾಟೀಸವಾಲು: ಪ್ರತಿವಾದಿಯರ ಪರ ಶ್ರೀ ಸಿ ಡಿ ವಕೀಲರಿಂದ:</u>**

1. ನನ್ನ ತಂದೆಯವರು ಇದೇ ನ್ಯಾಯಾಲಯದಲ್ಲಿ ಸಲ್ಲಿಸಿದ್ದ ಅಸಲು ದಾವಾ ಸಂಖ್ಯೆ 102/2008 ನೇದ್ದರಲ್ಲಿ ನಾನು ವಾರಸುದಾರರು ಅಂತಾ ಪಾರ್ಟಿಯಾಗಿ ಇದ್ದೆ ಎಂದರೆ ಸರಿ. ನನ್ನ ತಂದೆಯವರು ದಾವಾ ಆಸ್ತಿಯನ್ನು ಮುಕ್ತುಮ್ ಸಾಬರವರ ಬಳಿಯಿಂದ 1 ಎಕರೆ 18 ಗುಂಟೆ ಮತ್ತು 2 ಎಕರೆ ಜಮೀನನ್ನು ಖರೀದಿಸಿದ್ದಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ಹಂಪಮ್ಮ ಮತ್ತು ರತ್ನಮ್ಮ ಇವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ನನ್ನ ತಂದೆಯವರು ಖರೀದಿಸಿದ ಜಮೀನಿಗೆ ಸಂಬಂಧಪಟ್ಟಂತೆ ದಾಖಲಾತಿಗಳು ಕ್ರಮಬದ್ದವಾಗಿ ಇರಲಿಲ್ಲ ಕಾರಣ ನನ್ನ ತಂದೆಯವರಿಗೆ ಖರೀದಿಸುವ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯವರು ಖರೀದಿಸಿದ ಜಮೀನಿಗೆ ಸಂಬಂಧಪಟ್ಟಂತೆ ದಾಖಲಾತಿಗಳು ಕ್ರಮಬದ್ದವಾಗಿ ಇರಲಿಲ್ಲ ಕಾರಣ ಮುಕ್ತುಮ್ ಸಾಬರವರ ಹೆಂಡತಿ ಹೆಸರಲ್ಲಿ ಖಾತೆ ವರ್ಗಾವಣೆ ಆಯಿತು ಎಂದರೆ ಸರಿಯಲ್ಲ. ಹಂಪಮ್ಮ ಮತ್ತು ವೀರಭದ್ರಮ್ಮ ಕಾನೂನು ರೀತ್ಯ ಜಮೀನು ಖರೀದಿ ಮಾಡಿದ್ದಾರೆ, ಎಂದರೆ ಸರಿಯಲ್ಲ.

2. ನಾನು ದಾವಾ ಆಸ್ತಿಯ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ಹಂಪಮ್ಮ ಮತ್ತು ವೀರಭದ್ರಪ್ಪ ಕಾನೂನು ರೀತ್ಯ ಜಮೀನು ಖರೀದಿ ಮಾಡಿ ಸ್ವಾಧೀನದಲ್ಲಿ ಇದ್ದಾರೆ ಕಾರಣ ನಾನು ಜಮೀನಿನ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಹೆಸರಲ್ಲಿ ಇದ್ದ ಖರೀದಿ ಪತ್ರ ಬೇರೆ ಹಂಪಮ್ಮ ಮತ್ತು ವೀರಭದ್ರಪ್ಪ ರವರು ಖರೀದಿಸಿದ ಜಮೀನು ಬೇರೆ ಎಂದರೆ ಸರಿಯಲ್ಲ. ಜಾಲಹಳ್ಳಿ ಕ್ಯಾಂಪ್ ಗಾಂಧಿನಗರ ಗ್ರಾಮಗಳಲ್ಲಿಯ ಮೊದಲಿನ ಸರ್ವೇ ನಂಬರಗಳನ್ನು ಹೊಸ ನಂಬರ ಕೊಡಲಾಗಿದ್ದ ಕಾರಣ ಸರ್ವೇ ನಂಬರ ಬದಲಾವಣೆ ಆಗಿದೆ ಎಂದರೆ ಸರಿ. ಹಂಪಮ್ಮ ಮತ್ತು ವೀರಭದ್ರಪ್ಪ ರವರು ಖರೀದಿಸಿದ ಜಮೀನಿನ ಚಕಬಂದಿ ಬೇರೆ, ನನ್ನ ತಂದೆಯವರು ಖರೀದಿಸಿದ ಜಮೀನಿನ ಚಕಬಂದಿ ಬೇರೆ ಇರುತ್ತದೆ ಎಂದರೆ ಸರಿಯಲ್ಲ.

3. ಆಸ್ತಿ ಬೇರೆ ಬೇರೆ ಆಗಿದ್ದ ಕಾರಣ ಪ್ರತಿವಾದಿ ನಂ.1 ರಿಂದ 9 ರವರು ನ್ಯಾಯಾಲಯಕ್ಕೆ ಹಾಜರಾಗಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯವರು ದಾವಾ ಆಸ್ತಿಯನ್ನು ಮುಕ್ತುಮ್ ಸಾಬರವರ ಬಳಿಯಿಂದ 1 ಎಕರೆ 18 ಗುಂಟೆ ಮತ್ತು 2 ಎಕರೆ ಜಮೀನನ್ನು ಖರೀದಿಸಿದ ಆಸ್ತಿ ಸುಳ್ಳು ಖರೀದಿ ಪತ್ರ ಇರುತ್ತದೆ ಎಂದರೆ ಸರಿಯಲ್ಲ. ನನ್ನ ತಂದೆಯವರು ದಾವಾ ಆಸ್ತಿಯನ್ನು ಮುಕ್ತುಮ್ ಸಾಬರವರ ಬಳಿಯಿಂದ 1 ಎಕರೆ 18 ಗುಂಟೆ ಮತ್ತು 2 ಎಕರೆ ಜಮೀನನ್ನು ಖರೀದಿಸಿದ ಆಸ್ತಿಗೆ ಸಂಬಂಧಪಟ್ಟ ದಾಖಲೆಗಳು ತಪ್ಪಾಗಿ ಮತ್ತು ಕ್ರಮಬದ್ದವಾಗಿ ಇರದ ಕಾರಣ ನನ್ನ ತಂದೆ ಹೆಸರಲ್ಲಿ ಮ್ಯೂಟೇಶನ್ ಆಗಿಲ್ಲ ಎಂದರೆ ಸರಿಯಲ್ಲ.

4. ನನ್ನ ತಂದೆಯವರು ಇದೇ ನ್ಯಾಯಾಲಯದಲ್ಲಿ ಸಲ್ಲಿಸಿದ್ದ ಅಸಲು ದಾವಾ ಸಂಖ್ಯೆ 102/2008 ನೇದ್ದರಲ್ಲಿ ಆಸ್ತಿಯಲ್ಲಿ ಅವರು ಸಾವಧೀನದಲ್ಲಿ ಇರಲಿಲ್ಲ ಕಾರಣ ಪ್ರತಿವಾದಿ ನಂ. 10 ಮತ್ತು 11 ರವರಿಗೆ ಪಾರ್ಟಿ ಮಾಡಿಲ್ಲ ಎಂದರೆ ಸರಿಯಲ್ಲ. ನನಗೆ ದಾವೆ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ವಿಚಾರಿಸಿ ನಂತರ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ,

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು, ಸಿಂಧನೂರು